**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. :70 ಪ್ರಾ.ಸಾ. : 43**

ಸಾಕ್ಷಿಯ ಹೆಸರು : ಗೋವಿಂದ ನಾಯಕ್

ತಂದೆಯ ಹೆಸರು : ನಾಗೇಶ್

ವಯಸ್ಸು : 67 ವರ್ಷ

ಉದ್ಯೋಗ : ನಿವೃತ್ತ ತಹಶೀಲ್ದಾರ್

ವಾಸ : ಹಳದಿಪುರ, ಹೊನ್ನಾವರ.

**ದಿನಾಂಕಃ 03–10–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ದಿನಾಂಕ 19.12.2011 ರಿಂದ 10.02.2012 ರವರೆಗೆ ತಹಶೀಲ್ದಾರ ಅಂಕೋಲಾ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ದಿನಾಂಕ 16.12.2011 ರಂದು ಕರ್ನಾಟಕ ಲೋಕಾಯುಕ್ತ, ಕಾರವಾರ ಆರಕ್ಷಕ ನಿರೀಕ್ಷಕರಿಂದ ಆರೋಪಿ ಹೆಸರಿಗೆ ಇರುವ ಹೆಗ್ಗಾರಮಕ್ಕಿ ಗ್ರಾಮದ ಪ್ಲಾಟ್ ನಂಬರ್ 8 ರಲ್ಲಿ 6 ಎಕರೆ 26 ಗುಂಟೆ ಜಮೀನಿನಲ್ಲಿ 1998 ರಿಂದ 30.04.2010 ವರೆಗೆ ಬೆಳೆದ ಬೆಳೆಗಳ ವಿವರ ಅದರ ಉತ್ಪನ್ನದಿಂದ ಆದಾಯ ಖರ್ಚು ವಿವರವನ್ನು ಪ್ರತ್ಯೇಕವಾಗಿ ವರ್ಷವಾರು ನೀಡುವಂತೆ ಪತ್ರ ಬಂದಿತ್ತು. ಈಗ ಅದನ್ನು ನೋಡಿರುತ್ತೇನೆ. ಸದರಿ ಪತ್ರವನ್ನು ನಿಪಿ–240 ಎಂದು ಗುರುತಿಸಲಾಯಿತು. ದಿನಾಂಕ 10.02.2012 ರಂದು ನಾನು ಆ ಪತ್ರದ ಬಗ್ಗೆ ಪರಿಶೀಲನೆ ಮಾಡಿ ಕಂದಾಯ ನಿರೀಕ್ಷಕರು ಅಂಕೋಲಾರವರಿಂದ ವರದಿ ಪಡೆದು ಸದರಿ ಜಮೀನಿನಲ್ಲಿ 1998 ರಿಂದ 30.04.2010 ರವರೆಗೆ ಅಕೇಶಿಯಾ ಗಿಡಗಳನ್ನು ಬೆಳೆದಿದ್ದು 2011 ರಲ್ಲಿ ಎಲ್ಲಾ ಗಿಡಗಳನ್ನು ಕಡಿದು ಸಾಗಿಸಿರುತ್ತಾರೆ. ಅದರ ಹೊರತಾಗಿ ಬೇರೆ ಯಾವುದೇ ಬೆಳೆ ಬೆಳದಿಲ್ಲ, ಅಕೇಶಿಯಾ ಗಿಡ ಮರ ಕಟಾವಿನಿಂದ ಆದಾಯದ ಬಗ್ಗೆ ಅರಣ್ಯ ಇಲಾಖೆಯಿಂದ ಮಾಹಿತಿ ಪಡೆಯಬಹುದು ಎಂದು ವರದಿ ಸಲ್ಲಿಸಿರುತ್ತೇನೆ. ಅದರ ಹೊರತಾಗಿ ಬೇರೆ ಯಾವುದೇ ಆದಾಯ ಆ ಜಮೀನಿನಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತೆನೆ. ಈಗ ನಾನು ಸಲ್ಲಿಸಿದ ವರದಿ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ವರದಿಯನ್ನು ನಿಪಿ–240/1 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ–240/1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎಸ್ ಎಸ್ ರವರಿಂದ**

2. ನಿಪಿ–240 ಪತ್ರದಲ್ಲಿ ಹೇಳಿರುವ ಜಮೀನಿಗೆ ನಾನು ಖುದ್ದಾಗಿ ಬೇಟಿ ನೀಡಿರುವುದಿಲ್ಲ. ಆದರೆ ನನ್ನ ಅಧೀನ ಸಿಬ್ಬಂದಿಯಿಂದ ತನಿಖೆ ಮಾಡಿಸಿ ವರದಿ ಪಡೆದಿದ್ದೇನೆ. ಕಂದಾಯ ನಿರೀಕ್ಷಕರು ನೀಡಿದ ವರದಿಯನ್ನು ನಾನು ಲೋಕಾಯುಕ್ತ ಪೊಲೀಸನವರಿಗೆ ನೀಡಿರುವುದಿಲ್ಲ. ನಾನು ಕಂದಾಯ ನಿರೀಕ್ಷಕರಿಂದ ಯಾವುದೇ ವರದಿ ಪಡೆಯದೇ ಕಚೇರಿಯಲ್ಲಿ ಕುಳಿತು ಲೋಕಾಯುಕ್ತ ಪೊಲೀಸನವರಿಗೆ ಅವರು ಕೇಳಿದಂತೆ ವರದಿ ತಯಾರು ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನಿಂದ 1998 ರಿಂದ 2010 ರವರೆಗೆ ಉತ್ಪನ್ನ ಮತ್ತು ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸನವರಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ವಿ.ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.